# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 605 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-09-2022 |
| ಉತ್ತರಿಸುವ ಸಚಿವರು | : | ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ರಂಗ ಮಂದಿರಗಳ ಸ್ಥಾಪನೆಯ ಹಿಂದಿರುವ ಉದ್ದೇಶಗಳೇನು; ಸರ್ಕಾರಿ ರಂಗ ಮಂದಿರಗಳ ಬಾಡಿಗೆ ಮತ್ತು ಸುರಕ್ಷತಾ ಠೇವಣಿ ದರಗಳನ್ನು ಇತ್ತೀಚೆಗೆ ಏರಿಕೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ಏರಿಕೆ ಮಾಡಲಾಗಿದೆ; (ವಿವರ ನೀಡುವುದು) | ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಕವಿಗೋಷ್ಠಿ, ವಿಚಾರ ಸಂಕಿರಣ ಮತ್ತು ಸಾಹಿತ್ಯ ಕೃಷಿಗೆ ಸಂಬಂಧಿಸಿದ ಎಲ್ಲಾ ಬಗೆಯ ಕಾರ್ಯಕ್ರಮಗಳು ಮತ್ತು ಕಲಾಪ್ರಕಾರಗಳಾದ ಜಾನಪದ, ಸಂಗೀತ, ನೃತ್ಯ, ನಾಟಕ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಕಲೆಗಳ ಕುರಿತು ಕಲಾವಿದರು ತಮ್ಮ ಕಲಾ ಪ್ರದರ್ಶನವನ್ನು ನೀಡಲು ಅನುಕೂಲವಾಗುವಂತೆ ಮತ್ತು ಸಾರ್ವಜನಿಕರಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಲಾಕ್ಷೇತ್ರಗಳಲ್ಲಿ ಆಸಕ್ತಿ ಮೂಡಿಸಲು ಹಾಗೂ ಅವುಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವ ದೃಷ್ಟಿಯಿಂದ ಸರ್ಕಾರಿ ರಂಗಮಂದಿರಗಳ ಸ್ಥಾಪನೆ ಮಾಡಲಾಗಿರುತ್ತದೆ.<br><br>ಸರ್ಕಾರಿ ರಂಗಮಂದಿರಗಳ ಬಾಡಿಗೆ ಮತ್ತು ಸುರಕ್ಷತಾ ಠೇವಣಿ ದರಗಳನ್ನು ಏರಿಕೆ ಮಾಡಲಾಗಿರುವ ವಿವರವನ್ನು ಅನುಬಂಧ-1ರಲ್ಲಿ ಇರಿಸಿದೆ. |
| ಆ | ಈ ದರ ಏರಿಕೆಗಳಿಂದ ಕಲಾಪ್ರಕಾರಗಳ ಪುನಶ್ಚೇತನಕ್ಕೆ ಧಕ್ಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರಿ ರಂಗ ಮಂದಿರಗಳ ಬಾಡಿಗೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ರಂಗಮಂದಿರಗಳ ಸಮರ್ಪಕ ನಿರ್ವಹಣೆಯ ದೃಷ್ಟಿಯಿಂದ 2022ನೇ ಫೆಬ್ರವರಿಯಿಂದ ಇಲಾಖಾ ವ್ಯಾಪ್ತಿಯ ಬೆಂಗಳೂರಿನಲ್ಲಿರುವ ರಂಗಮಂದಿರಗಳ ಬಾಡಿಗೆ ದರವನ್ನು ಹೆಚ್ಚಿಸಲಾಗಿದೆ.<br><br>ಬಾಡಿಗೆ ಹೆಚ್ಚಳವಾಗುವುದಕ್ಕಿಂತ ಮುಂಚೆ ಹಾಗೂ ಬಾಡಿಗೆ ಹೆಚ್ಚಳದ ನಂತರ ರವೀಂದ್ರ ಕಲಾಕ್ಷೇತ್ರ ಕಾಯ್ದಿರಿಸಲಾದ ಮತ್ತು ಖಾಲಿ ಇರುವ ದಿನಗಳ ಬಗ್ಗೆ 03 ತಿಂಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ಇರಿಸಿದೆ.<br><br>ರಂಗಮಂದಿರದ ಕಾಯ್ದಿರಿಸುವಿಕೆಯಲ್ಲಿ ಬೇಡಿಕೆ ಹೆಚ್ಚಾಗಿದೆ ವಿನಃ ಕಡಿಮೆಯಾಗಿರುವುದಿಲ್ಲ. ಹೀಗಾಗಿ ಬಾಡಿಗೆ ಕಡಿಮೆ ಮಾಡುವ ಪ್ರಮೇಯವಿರುವುದಿಲ್ಲ. |

ಸಂಖ್ಯೆ: ಕಸಂವಾ 71 ಕವಿಸ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

409-659

5

# ಅನುಬಂಧ –I

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರಿನ ವ್ಯಾಪ್ತಿಗೆ ಒಳಪಡುವ ರಂಗಮಂದಿರಗಳ ಹೊಸ ಬಾಡಿಗೆ ದರ ಪಟ್ಟಿ

| ಕ್ರ.ಸಂ | ರಂಗಮಂದಿರಗಳ ಹೆಸರು ಮತ್ತು ಆಸನಗಳ ಸಂಖ್ಯೆ | ವಿವರ | ಬಾಡಿಗೆ | ಜಿ.ಎಸ್.ಟಿ | ಠೇವಣಿ | ಒಟ್ಟು | ಎರಡು ಪಾಳಿಗೆ ಒಂದು ದಿನಕ್ಕೆ ಒಟ್ಟು |
|---|---|---|---|---|---|---|---|
| 01 | ರವೀಂದ್ರ ಕಲಾಕ್ಷೇತ್ರ 830 ಆಸನಗಳು | ನಾಟಕ | 5000 | 900 | 5000 | 10900 | 21800 |
| | | ಸಾಂಸ್ಕೃತಿಕ ಕಾರ್ಯಕ್ರಮ | 6000 | 1080 | 5000 | 12080 | 24160 |
| 02 | ನಯನಸಭಾಂಗಣ 146 ಆಸನಗಳು | ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ | 3000 | 540 | 3000 | 6540 | 13080 |
| 03 | ಸಂಸ ಬಯಲು ರಂಗಮಂದಿರ | | 1000 | 180 | 1000 | 2180 | 4360 |
| 04 | ಆರ್ಟ್ ಗ್ಯಾಲರಿ | | 500 | 90 | 500 | 1090 | 2180 |
| 05 | ಮಹಿಳಾ ವಿಶ್ರಾಂತಿ ಕೊಠಡಿ | | 500 | 90 | 0 | 590 | 1180 |
| 06 | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ 292 ಆಸನಗಳು | ನಾಟಕ | 3000 | 540 | 3000 | 6540 | 13080 |
| | | ಸಾಂಸ್ಕೃತಿಕ ಕಾರ್ಯಕ್ರಮ | 4000 | 720 | 4000 | 8720 | 17440 |
| 07 | ಕಲಾಗ್ರಾಮ ಬಯಲು ರಂಗಮಂದಿರ | | 1000 | 180 | 1000 | 2180 | 4360 |

ಜಂಟಿ ನಿರ್ದೇಶಕರು (ಕೇಂದ್ರ ಕಛೇರಿ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

4

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ, ಕಲಾಗ್ರಾಮ ಬಯಲು ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಏಕ ಕಡತ ಸಂಖ್ಯೆ:ಡಿಕೆಸಿ-26011/117/2021.

**ಪ್ರಸ್ತಾವನೆ:**

ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ರವೀಂದ್ರ ಕಲಾಕ್ಷೇತ್ರ ಹಾಗೂ ನಯನ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಈಗಾಗಲೇ ನಿಗದಿಪಡಿಸಿರುವ ಬಾಡಲಿ ಪ್ರತಿ ಪಾಳಿಗೆ ಸಾಹಿತ್ಯಿಕ ಕಾರ್ಯಕ್ರಮಗಳು, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಹವ್ಯಾಸಿ ನಾಟಕ ತಂಡಗಳ ನಾಟಕ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಯಕ್ಷಗಾನ, ಸರ್ಕಾರ ಗುರುತಿಸಿ ಅನುದಾನ ಪಡೆಯುತ್ತಿರು ವ ವೃತ್ತಿ ನಾಟಕ ಕಂಪನಿಗಳು ಟಿಕೆಟ್ ನೀಡಿ ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂಇವಾ 24 ಕಸಧ 2022, ಬೆಂಗಳೂರು**
**ದಿನಾಂಕ: 24-02-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಛಯ, ಕಲಾಗ್ರಾಮ ಬಯಲು ರಂಗಮಂದಿರಗಳ ಮಾರ್ಗಸೂಚಿಯನ್ನು ಅನುಬಂಧದಲ್ಲಿರುವಂತೆ ಪರಿಷ್ಕರಿಸಿ ಆದೇಶಿಸಿದೆ.

2. ರವೀಂದ್ರ ಕಲಾಕ್ಷೇತ್ರ ಹಾಗೂ ಕನ್ನಡ ಭವನದ ವಿವಿಧ ರಂಗಮಂದಿರಗಳಿಗೆ ಪ್ರತ್ಯೇಕ ವಿದ್ಯುತ್ ಮೀಟರುಗಳನ್ನು ಅಳವಡಿಸಿದ ನಂತರ ವಿದ್ಯುತ್ ಬಿಲ್ ಅನ್ನು ಠೇವಣಿ ಹಣದಲ್ಲಿ ಕಡಿತ ಮಾಡಿ ಉಳಿದ ಠೇವಣಿ ಹಣವನ್ನು ವಾಪಸ್ಸು ಮಾಡುವಂತೆ ಸೂಚಿಸಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ:31-12-2021ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ವೆಂಕಟೇಶಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).

6966
28/2/22

ಇವರಿಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

E-3754648/2022 02/3/2022

<u>ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 24 ಕಸಧ 2022, ದಿನಾಂಕ:4-3-2022 ಕ್ಕೆ</u>

## ಅನುಬಂಧ – 01

**ರವೀಂದ್ರ ಕಲಾಕ್ಷೇತ್ರ, ನಯನ ರಂಗಮಂದಿರ, ಸಂಸ ಬಯಲು ರಂಗಮಂದಿರ, ಆರ್ಟ್ ಗ್ಯಾಲರಿ, ಮಹಿಳಾ ವಿಶ್ರಾಂತಿ ಕೊಠಡಿ, ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ ಬಯಲು ರಂಗಮಂದಿರಗಳ ನಿಗಧಿ ಪಡಿಸಿರುವ ಪರಿಷ್ಕೃತ ಬಾಡಿಗೆಯ ವಿವರಗಳು:**

| ಕ್ರ.ಸಂ | ವಿವರ | ಬಾಡಿಗೆ | | ಠೇವಣಿ | ಜಿ.ಎಸ್.ಟಿ 18% | ಒಟ್ಟು | ಷರಾ |
|---|---|---|---|---|---|---|---|
| 01 | ರವೀಂದ್ರ ಕಲಾಕ್ಷೇತ್ರ (ನಾಟಕ) | ಮೊದಲ ನೇ ಪಾಳಿ (9-2) | ರೂ.5,000/ | ರೂ.5,000/- | ರೂ.900/- | ರೂ.10,900/- | ಪ್ರತಿ ವರ್ಷ 5% ಬಾಡಿಗೆಯನ್ನು ಹೆಚ್ಚಿಸಲಾಗುವುದು. |
| | | ಎರಡನೇ ಪಾಳಿ (4-9) | ರೂ.5,000/- | ರೂ.5,000/- | ರೂ.900/- | ರೂ.10,900/- | |
| | ರವೀಂದ್ರ ಕಲಾಕ್ಷೇತ್ರ (ಸಾಂಸ್ಕೃತಿಕ ಕಾರ್ಯಕ್ರಮ) | ಮೊದಲ ನೇ ಪಾಳಿ (9-2) | ರೂ.6,000/- | ರೂ.5,000/- | ರೂ.1080/- | ರೂ.12,080/- | |
| | | ಎರಡನೇ ಪಾಳಿ (4-9) | ರೂ.6,000/- | ರೂ.5,000/- | ರೂ.1080/- | ರೂ.12,080/- | |
| 02 | ನಯನ ರಂಗಮಂದಿರ | ಮೊದಲ ನೇ ಪಾಳಿ (9-2) | ರೂ.3,000/- | ರೂ.3,000/- | ರೂ.540/- | ರೂ.6,540/- | --- |
| | | ಎರಡನೇ ಪಾಳಿ (4-9) | ರೂ.3,000/- | ರೂ.3,000/- | ರೂ.540/- | ರೂ.6,540/- | |
| 03 | ಸಂಸ ಬಯಲು ರಂಗಮಂದಿರ | (4-9) ಸಂಜೆ ಮಾತ್ರ | ರೂ.1000/- | ರೂ.1000/- | ರೂ.180/- | ರೂ.2,180/- | --- |
| 04 | ಆರ್ಟ್ ಗ್ಯಾಲರಿ | ಮೊದಲ ನೇ ಪಾಳಿ (9-2) | ರೂ.500/- | ರೂ.500/- | ರೂ.90/- | ರೂ.1,090/- | --- |
| | | ಎರಡನೇ ಪಾಳಿ (4-9) | ರೂ.500/- | ರೂ.500/- | ರೂ.90/- | ರೂ.1,090/- | |
| 05 | ಮಹಿಳಾ ವಿಶ್ರಾಂತಿ ಕೊಠಡಿ | ಮೊದಲ ನೇ ಪಾಳಿಗೆ (9-2) | ರೂ. 500/- | ಇಲ್ಲ | ರೂ.90/- | ರೂ.590/- | --- |
| | | ಎರಡನೇ ಪಾಳಿ (4-9) | ರೂ. 500/- | ಇಲ್ಲ | ರೂ.90/- | ರೂ.590/- | |

| | | | | | | | |
|---|---|---|---|---|---|---|---|
| 06 | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ (ನಾಟಕ) | ಮೊದಲನೇ ಪಾಳಿ (9-2) | ರೂ. 3,000/- | ರೂ.3,000/- | ರೂ.540/- | ರೂ.6,540/- | |
| | | ಎರಡನೇ ಪಾಳಿ (4-9) | ರೂ. 3,000/- | ರೂ.3,000/- | ರೂ.540/- | ರೂ.6,540/- | |
| | ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ (ಸಾಂಸ್ಕೃತಿಕ) | ಮೊದಲನೇ ಪಾಳಿ (9-2) | ರೂ.4,000/- | ರೂ.4,000/- | ರೂ.720/- | ರೂ.8,720/- | |
| | | ಎರಡನೇ ಪಾಳಿ (4-9) | ರೂ.4,000/- | ರೂ.4,000/- | ರೂ.720/- | ರೂ.8,720/- | |
| 07 | ಕಲಾಗ್ರಾಮ ಬಯಲು ರಂಗಮಂದಿರ | ಮೊದಲನೇ ಪಾಳಿಗೆ (9-2) | ರೂ. 1,000/- | ರೂ.1,000/- | ರೂ.180/- | ರೂ.2,180/- | |
| | | ಎರಡನೇ ಪಾಳಿ (4-9) | ರೂ. 1,000/- | ರೂ.1,000/- | ರೂ.180/- | ರೂ.2,180/- | |

(ಕೆ.ವೆಂಕಟೇಶಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ).

ಅನುಬಂಧ-2

| ಕ್ರ.ಸಂ | ತಿಂಗಳು | ಕಾಯ್ದಿರಿಸಿದ ದಿನಗಳು |
|---|---|---|
| 01 | ಫೆಬ್ರವರಿ-2022 | 19 ದಿನಗಳು |
| 02 | ಮಾರ್ಚ್-2022 | 26 ದಿನಗಳು |

ಬಾಡಿಗೆ ಹೆಚ್ಚಳದ ನಂತರ

| ಕ್ರ.ಸಂ | ತಿಂಗಳು | ಕಾಯ್ದಿರಿಸಿದ ದಿನಗಳು |
|---|---|---|
| 01 | ಏಪ್ರಿಲ್-2022 | 19 ದಿನಗಳು |
| 02 | ಮೇ-2022 | 30 ದಿನಗಳು |
| 03 | ಜೂನ್-2022 | 28 ದಿನಗಳು |